ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 74-78
Bi-Monthly, Peer-Reviewed, Open Access, Indexed Journal

ISSN: 2583-3510
SIRDF JOURNALS
editor@srujani.in
www.srujani.in

# ಧ್ರುಪದ ಗಾಯನ ಒಂದು ಅವಲೋಕನ

**ಸಕ್ಕುಬಾಯಿ ಆರ್ ನಾಯ್ಕರ***

*ಸಂಶೋಧನಾ ವಿದ್ಯಾರ್ಥಿ, ಸಂಗೀತ ಮತ್ತು ನೃತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಹೊಸಪೇಟೆ, ವಿಜಯನಗರ ಜಿಲ್ಲೆ.

***Abstract:***

*ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನ ಪ್ರಕಾರಗಳಲ್ಲಿ ಒಂದಾದ ಧ್ರುಪದ ಗಾಯನ ಪ್ರಕಾರವು ಭಾರತದ ಪುರಾತನವಾದ ಗೀತೆಯಾಗಿದೆ. ಈ ಗಾಯನವು ಸಾಮವೇದದ ಪುರಾತನ ಕಾಲದಿಂದಲೇ ಪ್ರಚಲಿತದಲ್ಲಿದೆ. ಧ್ರುಪದ ಗಾಯನವು ಉತ್ತರ ಭಾರತೀಯ ಶಾಸ್ತ್ರೀಯ ಗಾಯನ ಸಂಗೀತದ ಹಳೆಯ ರೂಪವಾಗಿದೆ. ಇದು ಸ್ವರ, ತಾಳ, ಮತ್ತು ಲಯವನ್ನು ಒಳಗೊಂಡಿರುವ ಶೈಲಿಯಾಗಿದೆ. ಈ ಗಾಯನ ಪದ್ಧತಿಯನ್ನು ಗ್ವಾಲಿಯರ್‌ನ ರಾಜ ಮಾನ್‌ಸಿಂಗ್ ತೋಮರ್ (1486–1516) 15ನೇ ಶತಮಾನದಲ್ಲಿ ಪ್ರಚಾರಕ್ಕೆ ತಂದರು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಗಾಯನವನ್ನು ಹಿಂದಿ, ಬ್ರಿಜ, ಉರ್ದು ಭಾಷೆಯಲ್ಲಿ ಹಾಡುತ್ತಾರೆ.*

***Keywords:*** *ಆಲಾಪ, ಬಾನಿ ಅಥವಾ ವಾಣಿ, ಲಂಘನೆ, ಸ್ವರ, ವಿರುದ, ತೇನ, ಪದ, ಪಾಠ, ತಾಲ.*

## ಪೀಠಿಕೆ

ಗಾಯನ, ವಾದನ ಮತ್ತು ನರ್ತನ ಈ ಮೂರು ಕಲೆಗಳಲ್ಲಿ ಆಂತರಿಕವಾದ ಒಂದು ಮಧುರ ಸಂಬಂಧವಿದ್ದು, ಈ ಮೂರು ಕಲೆಗಳು ಒಂದಕ್ಕೊಂದು ಪೂರಕ ಕಲೆಗಳಾಗಿವೆ, ಗಾಯನವು ವಾದನ ಮತ್ತು ನರ್ತನ ಕಲೆಗಳಿಗೆ, ವಾದನವು ಗಾಯನ ಮತ್ತು ನರ್ತನ ಕಲೆಗಳಿಗೆ, ನೃತ್ಯವು ಗಾಯನ ವಾದನ ಕಲೆಗಳಿಗೆ ಪೋಷಕವಾಗಿವೆ. ರಸ ಭಾವಗಳ ಅಭಿವ್ಯಕ್ತಿಯ ದೃಷ್ಟಿಯಿಂದ ಸಂಗೀತವು ಎಲ್ಲ ಲಲಿತಕಲೆಗಳಲ್ಲಿಯೇ ಶ್ರೇಷ್ಠವಾದ ಕಲೆಯಾಗಿದೆ. ಭಾರತೀಯರಿಗೆ ಸಂಗೀತವು ಒಂದು ವೇದವೆ ಆಗಿದೆ. ಏಕೆಂದರೆ ಸಾಮವೇದವು ಸಂಗೀತಮಯವಾಗಿದ್ದು ಪ್ರಪ್ರಥಮವಾಗಿ ಸಂಗೀತದ ಹುಟ್ಟನ್ನು ಸಾಮವೇದದಲ್ಲಿ ನೋಡಬಹುದಾಗಿದೆ.[1] ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯನ ಪ್ರಕಾರಗಳಲ್ಲಿ ಬಳಕೆಯಲ್ಲಿರುವ ಪ್ರಕಾರಗಳಾದ ಧ್ರುಪದ, ಭಜನೆ, ಗಜಲ್, ಖಯಾಲ್, ತರಾನಾ, ಠುಮ್ರಿ, ಧಮಾರ, ಹೋರಿ, ಕವ್ವಾಲಿ, ಸರಿಗಮ್, ಜಾನಪದ ಗೀತ ಮುಂತಾದ ಗಾನ ಶೈಲಿಗಳಿವೆ. ಅದರಲ್ಲಿ ಒಂದಾದ ದೃಪದ ಗಾನವು ಅತ್ಯಂತ ಪ್ರಾಮುಖ್ಯತೆ ಪಡೆದುದಾಗಿದೆ.

ಧ್ರುಪದ ಗಾಯನ ಶಾಸ್ತ್ರೀಯ ಸಂಗೀತದ ಗಾಯನ ಶೈಲಿಯಾಗಿದೆ ಈ ಗಾಯನವು ಸಾಮವೇದದ ಪುರಾತನ ಕಾಲದಿಂದಲೇ ಪ್ರಚಲಿತದಲ್ಲಿದೆ. ಇದು ಸ್ವರ, ತಾಳ, ಮತ್ತು ಲಯವನ್ನು ಒಳಗೊಂಡಿರುವ ಶೈಲಿಯಾಗಿದೆ. ಧ್ರುಪದ ಬಹುಶಃ ರಚನಾತ್ಮಕ ಹಾಡುಗಳನ್ನು ಸೂಚಿಸಲು ನಾಟ್ಯ

[1] ವಾಣಿ ಅನಿಲ್. ಸಂಗೀತ ದರ್ಶಿನಿ. ಪು.ಸಂ.11

***Please cite this article as:*** ಸಕ್ಕುಬಾಯಿ ಆರ್ ನಾಯ್ಕರ. (2022). ಧ್ರುಪದ ಗಾಯನ ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 1(3), 74–78.

ಶಾಸ್ತ್ರದಲ್ಲಿ ಉಲ್ಲೇಖಿಸಲಾದ ಧ್ರುವ ಪದದಿಂದ ಬಂದಿದೆ, ಧ್ರುವ ಅಂದರೆ ಸ್ಥಿರ. ಇದು ಆಧ್ಯಾತ್ಮಿಕ, ವೀರ ಚಿಂತನ ಶೀಲ, ಸದ್ಗುಣಶೀಲ ನೈತಿಕ ಬುದ್ಧಿವಂತಿಕೆ ಅಥವಾ ಸಂಗೀತ ಸಂಯೋಜನೆಯ ಗಂಬೀರ ರೂಪವಾಗಿದೆ. ಧ್ರುಪದ ಇದು ಭಾರತೀಯ ಉಪಖಂಡದಾದ್ಯಂತ ಕಂಡುಬರುವ ಶಾಸ್ತ್ರೀಯ ಸಂಗೀತದ ಪ್ರಮುಖ ರೂಪಗಳಲ್ಲಿ ಒಂದಾಗಿದೆ. ಧ್ರುಪದ ಗಾಯನವು ಉತ್ತರ ಭಾರತೀಯ ಶಾಸ್ತ್ರೀಯ ಗಾಯನ ಸಂಗೀತದ ಹಳೆಯ ರೂಪವಾಗಿದೆ. ಈ ಗಾಯನವು 3000 ಸಾವಿರ ವರ್ಷಗಳ ಹಿಂದಿನದು ಈ ಸಂಗೀತವು ಹಿಂದೂ ದೇವಾಲಯಗಳಲ್ಲಿ ಸೇರಿತ್ತು ಮತ್ತು ಮುಸ್ಲಿಂ ಮತ್ತು ಹಿಂದೂ ಆಡಳಿತಗಾರರ ರಾಜಮನೆತನದ ನ್ಯಾಯಾಲಯಗಳಲ್ಲಿ ನೆಲೆಸಿದೆ. ಮತ್ತು ವೈದಿಕ ಪಠಣಗಳು ಮತ್ತು ಮಂತ್ರಗಳ ಪವಿತ್ರಸಾರವನ್ನು ಉಳಿಸಿಕೊಂಡಿದೆ. ಇದು ಸಂಕೀರ್ಣವಾದ ಸಂಗೀತ ವ್ಯಾಕರಣದೊಂದಿಗೆ ಅತ್ಯಾಧುನಿಕ ಕಲಾ ಪ್ರಕಾರವಾಗಿ ವಿಕಸನಗೊಳ್ಳಲು ಪ್ರಾರಂಭಿಸಿತು ತನ್ನದೆ ಆದ ಈ ಪ್ರಕಾರದ ಅತ್ಯುತ್ತಮ ಪ್ರದರ್ಶಕರಾದ ಸೀನಿಯರ್ ಡಾಗರ್ಸ್ ಬ್ರದರ್ಸ್ ಕೂಡ ಇದನ್ನು ಎರಡು ಮುಖ್ಯ ಧ್ವನಿಗಳೊಂದಿಗೆ ಪ್ರದರ್ಶಿಸಲು ಮುಂದಾದರು ಧ್ರುಪದ ಗಾಯನದ ಕೇಂದ್ರ ಪರಿಕಲ್ಪನೆಯು ನಾದಯೋಗದ ಅಭ್ಯಾಸವಾಗಿದೆ.

ಈ ಸಂಗೀತ ಪ್ರಕಾರವನ್ನು ಉಲ್ಲೇಖಿಸುವ ಆರಂಭಿಕ ಮೂಲವೆಂದರೆ ಅಬ್ದುಲ್ ಫಜಲ್‌ನ ಐನ್–ಇ–ಅಕ್ಬರಿ 1593 ಈ ಕೃತಿ ನಂತರದಲ್ಲಿ ಗ್ವಾಲಿಯರ್‌ನ ರಾಜ ಮಾನ್‌ಸಿಂಗ್ ತೋಮರ್ (1486–1516) ಈ ಪದ್ಧತಿಯನ್ನು 15 ನೇ ಶತಮಾನದಲ್ಲಿ ಪ್ರಚಾರಕ್ಕೆ ತಂದರು ಎಂದು ವಿದ್ವಾಂಸರ ಅಭಿಪಾಯವಾಗಿದೆ. ಅವರ ಆಸ್ಥಾನದಲ್ಲಿ ಸಂಗೀತಗಾರರು ಇದ್ದರು ಎಂಬುದು ತಿಳಿದು ಬರುತ್ತದೆ. ಹಾಗೇ ಈ ಶೈಲಿ ಮೊಘಲರ ಕಾಲದಲ್ಲಿ ಧ್ರುಪದ ಗೀತೆಗಳನ್ನು ತುಲನಾತ್ಮಕವಾಗಿ ಹೊಸ ಸಂಗೀತದ ರೂಪವಾಗಿ ಚಿತ್ರಿಸಲಾಗಿದೆ. ಮೊಘಲರ ಆಸ್ಥಾನದಲ್ಲಿಯ ಸ್ವಾಮಿ ಹರಿದಾಸ್ ಅವರ ಶಿಷ್ಯ ತಾನ್‌ಸೇನ್ ಅವರ ಧ್ರುಪದ ಸಂಯೋಜನೆಗಳಿಂದ ದೃಪದ ಪ್ರಸಿದ್ಧವಾಯಿತು ಅವರ ಪ್ರಥಮ ಸಂಗೀತವು ಹೌದು. ಈ ಧ್ರುಪದ ಗಾಯನ ಪದ್ಧತಿಯ ಗೀತೆಗಳ ರಚನೆಯು ಹಿಂದಿ, ಬ್ರಿಜ, ಉರ್ದುಗಳಲ್ಲಿದ್ದು ಶಾಂತಿ, ಶೃಂಗಾರ, ವೀರ ರಸಗಳ ಪ್ರಧಾನವಾಗಿರುತ್ತದೆ. ಈ ರಚನೆಗಳಲ್ಲಿ ನಾಲ್ಕು ರೀತಿಯ ಭಾಗಗಳಿರುತ್ತವೆ ಅವು ಸ್ಥಾಯಿ, ಅಂತರ, ಸಂಚಾರಿ ಮತ್ತು ಅಭೋಗ ಇಂದಿನ ದಿನಗಳಲ್ಲಿ ಧ್ರುಪದ ಕೇವಲ ಎರಡು ಭಾಗಗಳನ್ನು ಹೊಂದಿದೆ ಸ್ಥಾಯಿ ಮತ್ತು ಅಂತರಾ ಇದರ ಪದಗಳು ಹೆಚ್ಚಾಗಿ ಬ್ರಜ ಬಾಷೆಯಿಂದ ಬಂದತವುಗಳು. ಧ್ರುಪದ ಗಾಯನಕ್ಕೆ ಪಕ್ಕವಾದ್ಯ ಪಖವಾಜ್ ಆಗಿತ್ತು ಇಂದು ತಬಲಾದೊಂದಿಗೆ ಧ್ರುಪದ ಗಾಯನ ಮಾಡುತ್ತಾರೆ. ಇದು ಅತ್ಯಂತ ಪ್ರಾಚೀನ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಕಾರವಾಗಿದೆ. ಪ್ರಾಚೀನ ಕಾಲದಲ್ಲಿ ಧ್ರುಪದ ಗೀತೆಯ ಮೇಲೆ ನೃತ್ಯ ಮಾಡುತ್ತಿದ್ದರು ಅದನ್ನು ಇಂದು ಡಾ. ಪುರು ದದೀಚ್ ಅವರು ಇತ್ತೀಚಿನ ದಿನಗಳಲ್ಲಿ ಮರುಪರಿಚಯಿಸಿದ್ದಾರೆ. ಇವರು ಭಾರತದ ಕಥಕ್ ನರ್ತಕಿಯಾಗಿದ್ದು ಔಪಚಾರಿಕ ಕಥಕ್ ವೇದಿಕೆಯಲ್ಲಿ ಧ್ರುಪದಅನ್ನು ತರಲು ಮತ್ತು ಸಂಯೋಜನೆಯನ್ನು 28 ಮಾತ್ರೆಗಳಲ್ಲಿ ರಚಿಸಿದ್ದಾರೆ.

**ಧ್ರುಪದ ಗಾಯನದ ಆವಿಷ್ಕಾರ ಮತ್ತು ಅಭಿವೃದ್ಧಿ**

ಧ್ರುಪದ ಗಾಯನ ಶೈಲಿಯು ಭಾರತದ ಪುರಾತನವಾದ ಗೀತೆಯಾಗಿದೆ. ಈ ಧ್ರುಪದ ಗಾಯನದ ಆವಿಷ್ಕಾರದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಬಿಪ್ರಾಯಗಳಿವೆ. ಹಲವು ವಿದ್ವಾಂಸರ ಪ್ರಕಾರ 15ನೇ ಶತಮಾನದ ರಾಜಾ ಮಾನ್ಸಿಂಗ್ ತೋಮ್ ಅವರು ಈ ಶೈಲಿಯನ್ನು ಕಂಡು ಹಿಡಿದಿದ್ದಾರೆ ಮತ್ತು ಅಭಿವೃದ್ಧಿಪಡಿಸಿದ್ದಾರೆ. ಇವರು ಗ್ವಾಲಿಯರ್ ಅನ್ನು ಸಂಗೀತದ ಕೇಂದ್ರವನ್ನಾಗಿ ಮಾಡಿದ್ದಾರೆ. ಅವರ

ಪ್ರಕಾರ ಈ ಗೀತೆಗಳನ್ನು ಸ್ಥಳೀಯ ಭಾಷೆಯಲ್ಲಿ ರಚಿಸಲಾಗಿದೆ. ಇವರು ಸ್ವತಃ ಕವಿ ಮತ್ತು ಸಂಗೀತಗಾರನಾಗಿದ್ದನು ಇವನು ತನ್ನ ರಾಣಿಯಾದ ಮೃಗನಯನಿಯ ಮನಃಸಂತೃಪ್ತಿಗೆ ಕವಿತೆಗಳನ್ನು ರಚಿಸಿ ಹಾಡುತ್ತಿದ್ದ ಹಾಡುಗಳೇ ಧ್ರುಪದಗಳು ಎಂಬ ಅಭಿಪ್ರಾಯ ಪಟ್ಟಿದ್ದಾರೆ. ಇವರು ಧಾತು ಮತ್ತು ಅಂಗಗಳ ಆಧಾರದ ಮೇಲೆ ಧ್ರುಪದ ಅನ್ನು ರಚಿಸಿದ್ದಾರೆ ಎಂದು ತಿಳಿದು ಬರುತ್ತದೆ.

ಪ್ರಬಂಧದ ಆರು ಅಂಗಗಳಾದ ಸ್ವರ, ವಿರುದ, ತೇನ, ಪದ, ಪಾತ, ಮತ್ತು ತಾಲ ಇವುಗಳ ಆಧಾರದ ಮೇಲೆ ಧ್ರುಪದಗಳು ರಚನೆಯಾಗಿವೆ. ಇವುಗಳಲ್ಲಿ ಪದ ಮತ್ತು ತೇನ ಪ್ರಮುಖಸ್ಥಾನದಲ್ಲಿವೆ ವಿರುದ ಮತ್ತು ಪಾತ ಇವು ಪಾದಸ್ಥಾನದಲ್ಲಿವೆ ವಿಭಿನ್ನವಾದ ಸ್ವರ ವಿಶೇಷಣ ಪದಗಳು ಕೂಡ ವಿರುದ, ಎಂದು ಕರೆದಿದ್ದಾರೆ. ಮುಖ್ಯವಾಗಿ ಇದರಲ್ಲಿ ಈಶ್ವರ ಸ್ತುತಿ ಮತ್ತು ಮಂಗಲಯುಕ್ತ ಶಬ್ದಗಳಿವೆ. ತ, ನ, ತೋಂ, ಇಂತಹ ನಿರರ್ಥಕ ಅಕ್ಷರಗಳಿಗೆ ತೇನ ಎಂದು ವಾದ್ಯಾಕ್ಷರಗಳಿವೆ. ಪಾತ ಎಂದು ಉಳಿದ ಪದ, ಮಂಠ ಮತ್ತು ತಂಕಾಲ ಶಬ್ದಗಳಿಗೆ ತಾಲ ಎಂದು ಹೇದ್ದಾರೆ[2]

ಈ ದೃಪದ ಗಾಯನ ಶೈಲಿಯಲ್ಲಿ ಶಬ್ದಗಳ ಅಲ್ಪತೆ ಇದ್ದು ಸ್ವರಗಳ ವಿಸ್ತಾರವು ಹೆಚ್ಚಾಗಿರುತ್ತದೆ. ಆದರೆ ಪ್ರಬಂಧಗಳಲ್ಲಿ ಶಬ್ದಗಳ ಮಹತ್ವ ಬಹಳ ಮುಖ್ಯವಾಗಿವೆ.

**ಧ್ರುಪದ ಗಾಯನ ಕ್ರಮ**

ಧ್ರುಪದದಲ್ಲಿ ಆಲಾಪಚಾರಿಯ ಮಹತ್ವವಿದೆ. ಸುಂದರ ಆಲಾಪ ಧ್ರುಪದನ ಜೀವ ಶಕ್ತಿ, ನೋಂ–ತೋಂ ಅವರ ಆಲಾಪ ಅವರ ಗಾಯನದ ವಿಶೇಷತೆ ಪುರಾತನ ಕಾಲದಲ್ಲಿ ದೇವರ ನಾಮಗಳಾದ ಅನಂತ ಹರಿ ಎಂಬ ಪದಗಳನ್ನು ಬಳಸುತ್ತಿದ್ದರು. ನಂತರ ಈ ಪದಗಳನ್ನು ನೋಂ–ತೋಂ ನಿಂದ ಬದಲಾಯಿಸಲಾಯಿತು ಪದಗಳು ಹೆಚ್ಚಾಗಿ ದೇವರ ಆರಾಧನೆಯೊಂದಿಗೆ ಸಂಬಂಧ ಹೊಂದಿದೆ. ಈ ಗಾಯನದಲ್ಲಿ ಗಮಕಕ್ಕೆ ವಿಶೇಷ ಸ್ಥಾನವಿದೆ. ವೀರ ಭಕ್ತಿ ಅಲಂಕಾರ ಇತ್ಯಾದಿಗಳಲ್ಲೂರಸವಿದೆ ಹಿಂದೆ ಧ್ರುಪದ ನಾಲ್ಕು ಬಾನಿಗಳು ಇದ್ದವು.

**ಧ್ರುಪದ ಗಾಯನದ ವಾಣಿಗಳು**

ಧ್ರುಪದ ಗಾಯನ ಶೈಲಿಯಲ್ಲಿ ಅವರವರ ಬೇರೆ ಬೇರೆ ಶೈಲಿಯನ್ನು ಪ್ರಯೋಗಿಸಿ ಹಾಡುತ್ತಿದ್ದರು. ಈ ವಿವಿಧ ಶೈಲಿಗಳಿಗೆ ಬಾನಿ ಎಂದು ಕರೆಯುತ್ತಿದ್ದರು. ವಾಣಿ ಎಂದು ಹೇಳುವ ಪದಕ್ಕೆ ಬಾನೀ ಎಂದು ಕರೆಯುತ್ತಿದ್ದರು ಬಾನಿಗಳಲ್ಲಿ ನಾಲ್ಕುವಿಧ ಅವುಗಳೆಂದರೆ ಗೋಬರ್ ಬಾನಿ, ಖಂಡಹಾರ ಬಾನಿ, ಡಾಗೂರ್ ಬಾನಿ, ಮತ್ತು ನೌಹಾರ ಬಾನಿ

**ಗೋಬರ್ ಬಾನಿ**

ಈ ಶೈಲಿಯು ತಾನಸೇನನಿಂದ ಪ್ರಾರಂಭವಾಯಿತು. ತಾನಸೇನ ಹಾಗೂ ಅವನ ಸಂಗಡಿಗರು ಹಾಡುವ ಈ ಧ್ರುಪದ ಶೈಲಿಗೆ ಗೌಡೀಯಬಾನಿ ಎನ್ನುತ್ತಿದ್ದರು. ನಂತರ ಗೋಬರ್ ಬಾನೀ ಎಂದು ಕರೆದರು. ಈ ಬಾನಿಯ ಗಾಯನ ಶೈಲಿಯು ಗಂಭೀರ, ಶಾಂತರಸ, ಸ್ವರಗಳ ಸ್ಪಷ್ಟತೆ, ಭಾವಾಭಿವ್ಯಕ್ತಿ ಇರುವುದರಿಂದ ಇದಕ್ಕೆ ಶುದ್ಧವಾಣಿ ಎಂದು ಕರೆಯುತ್ತಾರೆ.

**ಖಂಡಹಾರ ಬಾನಿ**

ಈ ಗಾಯನ ಶೈಲಿಯು ತಾನಸೇನನ ಅಳಿಯನಾದ ರಾಜಾ 'ಸಮ್ಮೋಹನ ಸಿಂಗ್ ಇವನು ಹಾಡುವ ಶೈಲಿಗೆ ಖಂಡಹಾರ ಬಾನಿ ಎಂದು ಕರೆಯುತ್ತಿದ್ದರು ಇವರು ಬೀನ್ ವಾದಕರು ಸಹ

[2] ಸಿದ್ಧರಾಮಯ್ಯ ಮಠಪತಿ ಗೋರಟಾ (ಸಂ.). (2008). ನಾದ ಲಹರಿ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ. ಪು.ಸಂ. 189

ಆಗಿದ್ದರು. ಈ ಗಾಯನ ಶೈಲಿಯ ಗತಿಯು ಚಪಲದಾಯಕವಾಗಿರುತ್ತಿತ್ತು. ಐಶ್ವರ್ಯದ ಆಡಂಬರತೆಯ "ತೀವ್ರ ಭಾವರಸೋದ್ವೀಪಕ" ವಾಗಿದೆ. ಇದರಲ್ಲಿ ಭಿನ್ನ ಭಿನ್ನ ಸ್ವರಾಲಂಕಾರಗಳನ್ನು ರಚಿಸಿ ಪ್ರಯೋಗಿಸುವುದರಿಂದ ಸಂಸ್ಕೃತ ಗ್ರಂಥಕಾರರು ಇದಕ್ಕೆ "ಭಿನ್ನಾಗೀತಿ" ಎಂದು ಕರೆದಿದ್ದಾರೆ. ಸ್ವರಗಳು ಖಂಡ ಖಂಡವಾಗಿ ಪ್ರಯೋಗಿಸುವುದರಿಂದ ಇದರ ಮಧುರತೆ ಹೆಚ್ಚಾಗುತ್ತದೆ. ಈ ಪದ್ಧತಿಯಲ್ಲಿ ಲಯ ಅತೀ ವಿಲಂಬಿತ ಗತಿ ಇಲ್ಲದ ನಿಧಾನ ಮಧ್ಯಗತಿಯಲ್ಲಿ ಸಾಗಿ ಶೀಘ್ರಭಾವೋದ್ವೇಗ ವಿಚಿತ್ರ ಖಂಡ ಸ್ವರಯುಕ್ತ ರೂಪದಲ್ಲಿ ರಂಜಿಸುತ್ತದೆ.

**ಡಾಗೂರ ಬಾನಿ**

ಈ ಗಾಯನ ಶೈಲಿಗೆ ಬ್ರಜ ಚಂದ್ರ ಡಾಗೂರ್ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದರಿಂದ ಇದಕ್ಕೆ ಡಾಗೂರ ಬಾನಿ ಎಂದು ಹೆಸರು ಬಂದಿದೆ, ಈ ವಂಶಜರು ಹಾಡುತ್ತಿದ್ದ ಧ್ರುಪದ ಶೈಲಿಗೆ ಡಾಗೂರ್ ಬಾನಿ ಎಂಬ ಹೆಸರಿನಿಂದ ಕರೆದರು ಈಗಲೂ ಡಾಗೂರ್ ಸಹೋದರರೆಂಬ ಹೆಸರಿನಿಂದ  ಧ್ರುಪದ, ಧಮಾರ್ ಶೈಲಿಯನ್ನು ಹಾಡುತ್ತಾ ಆ ಪರಂಪರೆಯನ್ನು ನಡೆಸಿಕೊಂಡು ಬಂದಿದ್ದಾರೆ. ಈ ಡಾಗೂರ್ ಬಾನಿಯ ಮುಖ್ಯ ಲಕ್ಷಣಗಳೆಂದರೆ ಸರಳತೆ, ಸೌಂದರ್ಯತೆ, ಗತಿಯಲ್ಲಿ ಸಹಜತೆ ಮತ್ತು ವಕ್ರ ಸ್ವರಗಳ ವಿಶೇಷ ಸೌಂದರ್ಯತೆ ಇರುವುದರಿಂದ ಈ ಶೈಲಿಯ ವೈಶಿಷ್ಟ್ಯವೆಂದರೆ ಲಾಲಿತ್ಯವಾಗಿ ಸರಳವಾದ ಗತಿಯಿಂದಲೂ ವಿಚಿತ್ರವಾಗಿ ನಿರ್ವಹಿಸುವ ಲಯಕಾರಿಗಳಿಂದಲೂ ಕೂಡಿದ ಶೈಲಿಯಿಂದ ಹಾಡುತ್ತಿದ್ದರು.

**ನೋಹಾರ ಬಾನಿ**

ಈ ಗಾಯನ ಶೈಲಿಯು ಪ್ರಸಿದ್ಧ ಹಾಜಿ ಸುಜಾನ್‌ಖಾನ್ ಮತ್ತು ತಾನಸೇನನ ಅಳಿಯನಾದ ಶ್ರೀಚಂದ್ ಎಂಬ ರಾಜಪೂತನು ನೌಹಾರ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದರು. ಅವರು ಹಾಡುತಿದ್ದ ಧ್ರುಪದ ಶೈಲಿಯನ್ನು ನೌಹಾರಬಾನಿ ಎಂದು ಕರೆಯುತ್ತಿದ್ದರು. ಇಬ್ಬರೂ ಸಹ ಅಕ್ಬರ್ ಬಾದಷಹನ ದರ್ಬಾರ ಗಾಯಕರಾಗಿದ್ದರು. ಈ ಗಾಯನ ಶೈಲಿಯು ಸಿಂಹದ ಗರ್ಜನೆಯಂತೆ ಎರಡೆರಡು  ಅಥವಾ ಮೂರು ಸ್ವರಗಳ ಪ್ರಯೋಗದಿಂದ ಲಂಘನೆ ಮಾಡಿ ಸ್ವರಗಳ ಪರಿವರ್ತಕ ರೂಪದಂತೆ ನೌಹಾರಬಾನಿ ಧ್ರುಪದ ಶೈಲಿಯನ್ನು ಹಾಡಿ ಆಶ್ಚರ್ಯಚಕಿತರನ್ನಾಗಿಸುವ  ಚಮತ್ಕಾರಗಳಿಂದ ಹಾಡುತ್ತಿದ್ದರು.

ಬಹುತೇಕ ಧ್ರುಪದ ಶೈಲಿಯನ್ನು ಹಾಡುವ ಕಲಾವಿದರೆಲ್ಲರೂ ಅಕ್ಬರ್ ಬಾದಶಹನ ಆಸ್ಥಾನದಲ್ಲಿ ದರ್ಬಾರ್ ಗಾಯಕರಾಗಿದ್ದರು. ನಂತರದಲ್ಲಿ ಬಿಜಾಪುರದ ಆದಿಲಶಾಹಿ ಮನೆತನದ ಶ್ರೇಷ್ಠ ದೊರೆಯಾದ  ಎರಡನೇ ಇಬ್ರಾಹಿಂ ಆದಿಲಶಾಹನು ಸಹ ಧ್ರುಪದ ಗಾಯಕನಾಗಿದ್ದನು ಹಾಗೇ 59 ಧ್ರುಪದ ಗೀತೆಗಳನ್ನು ಸಹ ರಚಿಸಿದ್ದಾರೆ.

**ಉಪಸಂಹಾರ**

ಉತ್ತರ ಭಾರತೀಯ ಶಾಸ್ತ್ರೀಯ ಸಂಗೀತ ಪ್ರಕಾರಗಳಲ್ಲಿ ಧ್ರುಪದ ಒಂದು ಪುರಾತನ ಶೈಲಿಯಾಗಿದೆ. ಇದರಲ್ಲಿ ಅನಿಬದ್ಧ ಆಲಾಪವಿರುತ್ತದೆ. ತಾನಕ್ಕೆ ಆಸ್ಪದವಿಲ್ಲ ಈ ಗಾಯನವನ್ನು ಪ್ರಸ್ತುತ ಪಡಿಸುವಾಗ ಪಖವಾಜ ಹೆಚ್ಚು ಪ್ರಚಾರದಲ್ಲಿದೆ. ಈಗಿನ ಕೆಲ ವಾದನಕಾರರು ತಬಲಾವಾದನವನ್ನು ಉಪಯೋಗಿಸುತ್ತಾರೆ. ಇದು ಲಯ ಪ್ರಧಾನವಾಗಿದೆ. ಈ ಪದ್ಧತಿಯು ಗಂಭೀರ ಸ್ವರೂಪದ್ದಾಗಿದ್ದು ಇದನ್ನು ಚೌತಾಲ್, ಧಮಾರ, ತೇವ್ರಾ, ಸೂಲ್‌ತಾಳ್, ಝುಪ್ತಾಲ ತಾಳಗಳಲ್ಲಿ ಹಾಡುತ್ತಾರೆ.

**ಪರಾಮರ್ಶನ ಗ್ರಂಥಗಳು**


- ಆದ್ಯಾ ರಂಗಾಚಾರ್ಯ. (1984). ನಾಟ್ಯಶಾಸ್ತ್ರ. ಅಕ್ಷರ ಪ್ರಕಾಶನ.
- ಮಂಜರಿ ಜೋಶಿ, ನಾ, ವುಜಿರೆ (ಅನು.). (2009). ಭಾರತೀಯ ಸಂಗೀತ ಪರಂಪರೆ. ನ್ಯಾಷನಲ್ ಬುಕ್ ಟ್ರಸ್ಟ್–ಇಂಡಿಯಾ.
- ಪಂಡಿತ್ ತಪಲೆ ಎಸ್. ಎ. (1996). ಹಿಂದೂಸ್ತಾನಿ ಸಂಗೀತದ ಜ್ಞಾನಕೋಶ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ.
- ಪಂಡಿತ್ ಸಿದ್ಧರಾಮಯ್ಯ ಮಠಪತಿ ಗೋರಟಾ (ಸಂ.). (2008). ನಾದ ಲಹರಿ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ.